ಮುಂಬಯಿಯ ಗದ್ದಲ, ಬೆಂಗಳೂರಿನ ಟ್ರಾಫಿಕ್ ಜಾಂ ಎಲ್ಲ ಆಪ್ತವೆನ್ನಿಸಿತು. ಒಂದು ತಿಂಗಳು ಎದುರು ಯಾರೇ ಸಿಕ್ಕಲಿ, ಇದೇ ಕತೆಯನ್ನು ಹೇಳಿದರು.

ಅವತ್ತು ಕಂಪ್ಯೂಟರೆದುರು ಕುಳಿತು ಮಕ್ಕಳೊಡನೆ ಮಾತಾಡಿ ಮುಗಿಸಿದ್ದರು. ಕೆರೋಲಿನದಲ್ಲಿ ರಾತ್ರಿಯೂಟದ ಸಮಯವಾಗಿತ್ತು. ಮೆನನ್ ಕಾಫಿ ಕುಡಿಯುತ್ತ ಅಂದರು: 'ದೇವಕಿ, ನಂಗೆ ನೆನಪಾಗ್ಲೇ ಇಲ್ಲ ನೋಡು, ಮನೆ ಕಾಗದಪತ್ರ, ಲಾಕರು, ಫಿಕ್ಸೆಡ್ ಡಿಪಾಸಿಟ್ಟು ವಿವರ ಎಲ್ಲಾ ಮಕ್ಕಳಿಗೆ ತಿಳಿಸಿಡ್ಬೇಕು. ಎಲ್ಲಾ ನೀಲಿ ಬ್ರೀಫ್‌ಕೇಸಲ್ಲಿದೆ. ಮುಂದಿನ ಸಾರಿ ಅವ್ರು ಬಂದಾಗ ನೆನಪು ಮಾಡು.'

'ಈಗ ಯಾಕೆ ಅದೆಲ್ಲಾ? ಮಾತ್ರೆ ತಗೊಂಡಾಯ್ತ?'

'ಹಾ... ತಗೊಂಡೆ. ಹಾಗಲ್ವೇ... ಹೇಳ್ಲಿಕ್ಕಾಗಲ್ಲ ನೋಡು. ಹುಡುಕಾಡುವಂತಾಗಬಾರ್ದು. ಅಲ್ಲಿದ್ದದ್ದು ಹಾಗೇ ಬಿದ್ದಿರುವಂತಾಗಿ...' ಒಂದುಕ್ಷಣ ಯೋಚಿಸುತ್ತಿದ್ದು 'ಗುರುವಾಯುರಪ್ಪಾ...' ಅಂತ ನೆನಸಿಕೊಂಡರು. ಟೀವಿ ರಿಮೋಟ್ ಹಿಡಿದರು. 'ಆಯ್ತು ಇನ್ನು. ಇಪ್ಪತ್ನಾಲ್ಕು ಗಂಟೆ ನೋಡಿದ್ರು ಟೀವಿ ಮಾತ್ರ ಬೇಸರ ಬರೋದಿಲ್ಲ.' ದೇವಕಿಮಾಮಿ ಆಕ್ಷೇಪಿಸಿದರು.

'ಮತ್ತೇನು ಮಾಡೂಂತೀಯ? ಬ್ಯಾಂಕಿನ ಕೆಲಸ, ಕರೆಂಟು ಬಿಲ್ಲು ಕಟ್ಟೋ ಕೆಲಸ ಮುಗಿದಿದೆ. ಮೊನ್ನೆ ಏನಾಯ್ತು ಗೊತ್ತಾ? ಬ್ಯಾಂಕಿನಲ್ಲಿ ನನ್ನಕಡೆ ಲಕ್ಷ್ಯ ಕೊಡತಾನೇ ಇಲ್ಲ. ಹಿರಿಯ ನಾಗರಿಕರು ಅಂದರೆ ನಿಮಗೆ ಅಸಡ್ಡೆ ಅಂತಾ ಕೈಹಚ್ಚಿದೆ ನೋಡು...'

'ಸಾಕು, ಟೀವಿನೇ ನೋಡಿ.'

ಜಾಹೀರಾತು ಸುರುವಾಯಿತು. ಅದವರಿಗೆ ಬೋರಾಗುವುದಿಲ್ಲ. ಸಂವಾದಕ್ಕಿಳಿಯುತ್ತಾರೆ. ಒಬ್ಬ ಸ್ಮಾರ್ಟಾಗಿದ್ದವ ಗಲೀಜಾಗಿ ಕಂದುಬಣ್ಣಕ್ಕೆ ತಿರುಗಿದ ಕಮೋಡಿಗೆ ಸ್ಟೈಲಾಗಿ ಹಸಿರು ದ್ರಾವಣ ಒರೆಸಿ ತಿಕ್ಕಿ ಫ್ಲಷ್ ಮಾಡಿ ಮುಗುಳ್ನಕ್ಕ. ಕಮೋಡು ಬೆಳ್ಳಗೆ ಅವನ ಹಲ್ಲಿನಂತೆ ಲಕಲಕಿಸಿತು. 'ನಮ್ಮನೆಗೆ ಯಾವಾಗ ಬರ್ತೀಯ? ನಮ್ಮ ಕಮೋಡು ಇನ್ನೂ ಹೊಲಸಾಗಿ ನಿನಗಾಗಿ ಕಾಯ್ತಿದೆ' ಅಂದರು ಮೆನನ್.

ಗಂಡ ಹೆಂಡತಿ ಮಕ್ಕಳೆಲ್ಲ ಒಂದು ಕೇಶತೈಲ ಬಾಟಲಿಗಾಗಿ ಕಚ್ಚಾಡಿ ನಮ್ಮನೇಲಿ ಎಲ್ರೂ ಇದ್ನೆ ಉಪಯೋಗಿಸೋದು ಅಂತ ಘೋಷಿಸಿದಳು ಯಜಮಾನಿ. 'ನಮ್ಮನೇಲಿ ವಗ್ಗರಣೆಗೂ ಅದ್ನೇ ಉಪಯೋಗಿಸೋದು, ನನ್ಹೆಂಡತೀನ ಕೇಳು ಬೇಕಿದ್ರೆ' ಜೋಡಿಸಿದರು ಮೆನನ್. ಕ್ರಿಕೆಟ್ ಸುರುವಾಯ್ತು. ಬ್ಯಾಟ್ಸ್‌ಮನ್ ಬೌಂಡರಿ ಹೊಡೆದ. 'ಅದು... ಅದು ಹೊಡ್ತ ಅಂದ್ರೆ, ಒಳ್ಳೇ ಹಿಟ್ಟರಪ ನೀನು!' ಮುಂದಿನದು ಶಾರ್ಟ್‌ಪಿಚ್ಚು ಬಾಲು; ಪುಟಿದು ಬಂತು. ಬ್ಯಾಟುಬೀಸಿ ಕ್ಯಾಚುಕೊಟ್ಟು ಔಟಾದ. 'ಥೂ ಮುಟ್ಠಾಳ, ಹಾಫ್‌ವ್ಯಾಲಿ ಮಾಡಿ ಲೆಗ್‌ಸೈಡಿಗೆ ಹೊಡಿಬಾರ್ದೇನೋ... ಒಳ್ಳೆ ಎಮ್ಮೇಗೆ ಹೊಡದ್ಹಾಗೆ ಹೊಡೆದ್ರೆ ಔಟಾಗ್ದೆ ಇನ್ನೇನು?...'

'ಮೆನನ್‌ತಾತ ಟೀವಿ ಹಚ್ಚಿದ್ರು ಅನ್ಸುತ್ತೆ...' ಪಕ್ಕದಮನೆ ಸುನಿತಾಳ ಐದುವರ್ಷದ ಮಗ ಅಮ್ಮನ ಹತ್ತಿರ ಹೇಳಿದ. ಎಲ್ಲರಿಗು ಅದು ಮಾಮೂಲು. ಗದ್ದಲ ಇಲ್ಲವೆಂದರೆ ಮೆನನ್ ಮನೆಯಲ್ಲಿಲ್ಲ ಅಂತಲೆ ಅರ್ಥ.

ಮಧ್ಯಾಹ್ನ ಊಟದ ನಂತರ ನಿದ್ದೆಮಾಡಿ ಕಾಫಿ ಕುಡಿದು ಲಿಫ್ಟಿನಲ್ಲಿ ಕೆಳಗೆ ಬಂದರು. ಅಪಾರ ವಾಹನ ಸಂಚಾರದ ಮಧ್ಯೆ ಬಿಡುವು ಸಿಗುವುದನ್ನು ಕಾಯುತ್ತಾ ರಸ್ತೆಪಕ್ಕ ನಿಂತರು. ಅಪಾರ್ಟ್‌ಮೆಂಟಿನ ರಮಣ ರಾವ್ ಕಂಡು ಬನ್ನಿ ಅಂತ

